1. ಬೆಳಗಾಂ ಜಿಲ್ಲೆಯ ಸವದತ್ತಿ ತಾಲ್ಲೂಕಿನ ಹಿರೇಬೂದನೂರು ಕುದರನಹಟ್ಟಿ, ತಡಸಲೂರು ಏಣಗಿ ಕುಡಿಯುವ ನೀರಿನ ಯೋಜನೆಗಳಿಗೆ ಆಡಳಿತಾತ್ಮಕ ಹಾಗೂ ತಾಂತ್ರಿಕ ಮಂಜೂರಾತಿಯನ್ನು ನೀಡಲಾಗಿದೆಯೇ?

2. ಈ ಕೆಲಸಗಳು ಮಂದ ಗತಿಯಲ್ಲಿ ನಡೆಯುತ್ತಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ?

3. ಈ ಕೆಲಸಗಳಿಗೆ ಏನಾದರೂ ಆರ್ಥಿಕ ತೊಂದರೆ ಇದೆಯೇ? ಹಾಗಿದ್ದಲ್ಲಿ ಈ ಕೆಲಸಗಳನ್ನು ಎಂದು ಪೂರ್ಣಗೊಳಿಸಲಾಗುವುದು?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿ) :-

1. ಹೌದು

2. ಬಂದಿದೆ

3. ಈ ಕೆಲಸಗಳಿಗಾಗಿ ಆರ್ಥಿಕ ತೊಂದರೆ ಇಲ್ಲ. ಈ ಎಲ್ಲಾ ಯೋಜನೆಗಳನ್ನು 1995ರ ಮಾರ್ಚ್ ಅಂತ್ಯದೊಳಗೆ ಪೂರ್ತಿಗೊಳಿಸಲು ಯೋಜಿಸಲಾಗಿದೆ.

ವಿಷಯ : ರಾಜ್ಯದಲ್ಲಿ ಒಂದು ಅಂಕಿ ಲಾಟರಿ ಯೋಜನೆ ಬಂದ್

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 423 (743)

ಶ್ರೀ ಶಿವಾನಂದ .ಹೆಚ್. ಕೌಜಲಗಿ (ಬೈಲಹೊಂಗಲ) :- ಮಾನ್ಯ ಸಣ್ಣ ಉಳಿತಾಯ, ಲಾಟರಿಗಳು, ಕೆಜಿಐಡಿ ಮತ್ತು ಹೆಚ್‌ಕೆಡಿಬಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಒಂದಂಕಿ ಲಾಟರಿ ಯೋಜನೆಯು ಈಗ ರಾ[illegible]ಲ್ಲಿ ಚಲಾವಣೆಯಲ್ಲಿ ಇರುವುದೇ?

ಆ) ಹಾಗಿದ್ದಲ್ಲಿ, ಈ ಒಂದು ಅಂಕಿ ಲಾಟರಿ ಯೋಜನೆಯನ್ನು ಬಂದು ಮಾಡಲು ಸರ್ಕಾರ ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಮದನ ಗೋಪಾಲ್ ನಾಯಕ್ (ಸಣ್ಣ ಉಳಿತಾಯ, ಲಾಟರಿಗಳು, ಕೆಜಿಐಡಿ ಮತ್ತು ಹೆಚ್‌ಕೆಡಿಬಿ ರಾಜ್ಯ ಮಂತ್ರಿಗಳು) :-

ಅ) ಕರ್ನಾಟಕ ರಾಜ್ಯವು ತನ್ನ ಒಂದಂಕಿ ಲಾಟರಿಯನ್ನು ದಿನಾಂಕ : 29.11.92ರಿಂದ ರದ್ದು ಪಡಿಸಿದೆ. ಆದರೆ ಬೇರೆ ರಾಜ್ಯಗಳು ನಡೆಸಿರುವ ಲಾಟರಿಯ ಟಿಕೇಟುಗಳನ್ನು ದಿನಾಂಕ : 21.4.94ರ ತನ್ನ ತೀರ್ಪಿನಲ್ಲಿ ಸರ್ವೋಚ್ಚ ನ್ಯಾಯಾಲಯದ ನಿಗದಿ ಪಡಿಸಿರುವ ಷರತ್ತುಗಳಿಗೆ ಅನುಗುಣವಾಗಿ ಇದೆಯೇ ಎಂಬುದನ್ನು ಪರಿಶೀಲಿಸಿ ಅವುಗಳ ಮಾರಾಟಕ್ಕೆ ಅನುಮೋದನೆ ನೀಡಲಾಗುತ್ತಿದೆ.

ಆ) ಒಂದು ರಾಜ್ಯದ ಲಾಟರಿ ಯೋಜನೆಯ ಟಿಕೇಟುಗಳ ಮಾರಾಟವನ್ನು ನಿಷೇದಿಸುವ ಅಧಿಕಾರ ಇನ್ನೊಂದು ರಾಜ್ಯ ಸರ್ಕಾರಕ್ಕಿರುವುದಿಲ್ಲ ಈ ಅಧಿಕಾರವನ್ನು ರಾಜ್ಯಗಳಿಗೆ ನೀಡುವಂತೆ ಕೇಂದ್ರ ಸರ್ಕಾರವನ್ನು ಕೋರಲಾಗಿದೆ.

ವಿಷಯ : ಶಾಲೆ ಮತ್ತು ದೇವಾಲಯದ ಹತ್ತಿರ ಸಾರಾಯಿ ಅಂಗಡಿಗಳನ್ನು ಮುಚ್ಚಿಸುವ ಬಗ್ಗೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 424 (742)

ಶ್ರೀ ಶಿವಾನಂದ. ಹೆಚ್. ಕೌಜಲಗಿ (ಬೈಲಹೊಂಗಲ) :- ಮಾನ್ಯ ಅಬಕಾರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಶಾಲೆಯ ಸಮೀಪದಲ್ಲಿ ಹಾಗೂ ದೇವಸ್ಥಾನಗಳ ಹತ್ತಿರ ಸಾರಾಯಿ ಅಂಗಡಿ ಮತ್ತು ಬಾರುಗಳನ್ನು ಇಡಬಾರದೆಂದು ನಿಯಮವಿದ್ದರೂ ಸಹ ನಿಯಮಗಳನ್ನು ಉಲ್ಲಂಘಿಸಿ ಬೆಳಗಾವಿ ಜಿಲ್ಲೆಯಲ್ಲಿ ಇಂಥಹ ಅಂಗಡಿಗಳನ್ನು ಇನ್ನುವರೆಗೂ ನಡೆಸಲಾಗುತ್ತಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ನಿಯಮಗಳನ್ನು ಉಲ್ಲಂಘಿಸಿ ನಡೆಸಲಾಗುತ್ತಿರುವ ಇಂಥಹ ಅಂಗಡಿಗಳನ್ನು ಮುಚ್ಚಲು ಸರ್ಕಾರದವರು ಕ್ರಮ ಕೈಗೊಳ್ಳುವರೇ ?

ಶ್ರೀ. ರಮಾನಾಥ್‌ರೈ (ಅಬಕಾರಿ ರಾಜ್ಯ ಸಚಿವರು):-

ಅ) ಶಾಲೆ ಹಾಗೂ ದೇವಸ್ಥಾನಗಳ ಸಮೀಪದಲ್ಲಿ ಸಾರಾಯಿ ಅಂಗಡಿಗಳಿಗೆ ಅನುಮತಿ ನೀಡಿರುವುದಿಲ್ಲ. ಭಾರತೀಯ ತಯಾರಿಕಾ ಮದ್ಯದ 40 ಅಂಗಡಿಗಳು ಬೆಳಗಾವಿ ಜಿಲ್ಲೆಯಲ್ಲಿ ಶಾಲೆ ಅಥವಾ ದೇವಸ್ಥಾನಕ್ಕೆ ಸಮೀಪವಿದ್ದು ಅವುಗಳಿಗೆ ಮೂರು ತಿಂಗಳ ಅವಧಿಗೆ 30.9.94ರವರೆಗೆ ತಾತ್ಕಾಲಿಕ ಸನ್ನದು ನೀಡಲಾಗಿದೆ.

ಆ) ಕರ್ನಾಟಕ ಅಬಕಾರಿ ಸನ್ನದುಗಳ (ಸಾಮಾನ್ಯ ಷರತ್ತುಗಳು) ನಿಯಮಾವಳಿಗಳ ನಿಯಮ (5)ರ ಜಾರಿಯಿಂದ ಪರಿಣಾಮಕ್ಕೊಳಗಾದ ಮದ್ಯದ ಅಂಗಡಿಗಳನ್ನು ಬೇರೊಂದು ಆಕ್ಷೇಪಣಾ ರಹಿತ ಸ್ಥಳಕ್ಕೆ ಸ್ಥಳಾಂತರಿಸಲು ಅರ್ಜಿದಾರರು ಒಪ್ಪಿ ಛಾಪಾ ಕಾಗದದ ಮೇಲೆ ಮುಚ್ಚಳಿಕೆ ಪತ್ರ ಬರೆದು ಕೊಟ್ಟ ಮೇರೆಗೆ 30.9.94ಕ್ಕೆ ಅಂತ್ಯಗೊಳ್ಳುವ ಷರತ್ತಿನ ಸನ್ನದುಗಳನ್ನು ಕೊಡಲಾಗಿದ್ದು ಸದರಿ ದಿನಾಂಕದೊಳಗೆ ಈ ಅಂಗಡಿಗಳನ್ನು ಆಕ್ಷೇಪಣೆಯಿಲ್ಲದ ಸ್ಥಳಗಳಿಗೆ ವರ್ಗಾಯಿಸಬೇಕಾಗಿದೆ.

ವಿಷಯ : ಪಶು ಚಿಕಿತ್ಸಾಲಯಗಳಿಗೆ ಔಷಧಿ ಸರಬರಾಜು .

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 425 (749)

ಶ್ರೀ. ಕೆ. ಸಿ. ಮೊಡಗೇಕರ ದೇಸಾಯಿ (ಹಿರೇಬಾಗೇವಾಡಿ):- ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಎಲ್ಲಾ ಪಶುಚಿಕಿತ್ಸಾಲಯಗಳಿಗೆ ಔಷಧಿಗಳನ್ನು ಸರಬರಾಜು ಮಾಡಲು ನಿಗದಿಪಡಿಸಿರುವ ಒಟ್ಟು ಮೊತ್ತವೆಷ್ಟು ;